


# ಮತ್ತೊಂದು ಚಾನ್ಸ್!

**ಬದುಕು ನಮಗೆ ಕೊಡುವ ಮತ್ತೊಂದು ಚಾನ್ಸ್ ಜೊತೆಗೇ ನಾವೂ ನಮ್ಮ ಬದುಕಿನ ಭಾಗವಾದವರಿಗೆ ಮತ್ತೊಂದು ಚಾನ್ಸ್ ಕೊಡುವ ಸಂದರ್ಭ ಬರುತ್ತದೆ. ಅದನ್ನು ಹೇಗೆ ನಿಭಾಯಿಸುತ್ತೇವೆ ಎನ್ನುವುದು ನಮ್ಮ ವ್ಯಕ್ತಿತ್ವವನ್ನೂ ತೋರಿಸುತ್ತದೆ ಎಂಬುದನ್ನು ಈ ಕಿರುಚಿತ್ರದಲ್ಲಿ ಹೇಳಲಾಗಿದೆ.**

■ ಗೌರಿ

'ಎಲ್ಲರಿಗೂ ಬದುಕು ಒಂದು ಚಾನ್ಸ್ ಕೊಡುತ್ತದೆ. ಅದನ್ನು ಸರಿಯಾಗಿ ಬಳಸಿಕೊಳ್ಳಬೇಕು' ಎಂಬ ಮಾತನ್ನು ಕೇಳಿಯೇ ಇರುತ್ತೇವೆ. ಆದರೆ ನಾವು ನಮ್ಮ ಬದುಕಿನ ಭಾಗವಾಗಿರುವವರಿಗೆ ಎಷ್ಟು ಚಾನ್ಸ್ ಕೊಡುತ್ತೇವೆ? ಅವರು ಮಾಡಿದ ತಪ್ಪನ್ನು ಕ್ಷಮಿಸಿ, ಕೈ ಹಿಡಿದು ಮುನ್ನಡೆಯುತ್ತೇವೆ? ಈ ಪ್ರಶ್ನೆಯನ್ನೇ ಮುನ್ನಲೆಯಲ್ಲಿಟ್ಟುಕೊಂಡು ರೂಪಿಸಿದ ಕಿರುಚಿತ್ರ, 'ಲೈಫ್‌ಲೈನ್'.

ರಘು ಮತ್ತು ಪಾಯಲ್ ಹೊಸತಾಗಿ ಮದುವೆಯಾದವರು. ಅಂದು ಹೆಂಡತಿ ಹೊರಗೆ ಹೋಗಿದ್ದಾಳೆ. ರಘು ಇಡೀ ಮನೆಯನ್ನು ಸಿಂಗರಿಸಿ, ಮೊದಲ ಭೇಟಿ, ಮೊದಲ ಮುತ್ತು ಹೀಗೆ ಅವರಿಬ್ಬರ ಪಯಣದ ಎಲ್ಲ ಸಿಹಿನೆನಪುಗಳನ್ನೂ ಮರುಕಳಿಸುವ ಹಾಗೆಯೇ ಮನೆಯನ್ನು ಸಿಂಗರಿಸಿದ್ದಾರೆ. ಮನೆಗೆ ಬರುವ ಪಾಯಲ್ ಇದನ್ನೆಲ್ಲ ನೋಡಿ ಏನು ಹೇಳಬಹುದು? ಅವಳ ಸಂತೋಷದ ಅಭಿವ್ಯಕ್ತಿ ಹೇಗಿರಬಹುದು ಎಂದೆಲ್ಲ ಮನಸಲ್ಲಿ ಯೋಚಿಸುತ್ತ ಪುಳಕಗೊಳ್ಳುತ್ತಿದ್ದಾನೆ.

ಇತ್ತ ಪಾಯಲ್ ಮೊಬೈಲ್‌ನಲ್ಲಿ ಚಾಟ್ ಮಾಡುತ್ತ ರಸ್ತೆಯಲ್ಲಿ ನಡೆದುಬರುತ್ತಿದ್ದಾಳೆ. ಆಗಲೇ ಸಂಜೆಗತ್ತಲಾಗಿದೆ. ತನ್ನ ಮುತ್ತ ಯಾರೋ ಸುಳಿದ ಹಾಗೆ ಭಾಸವಾಗುತ್ತದೆ. ಹೆದರಿ ರಸ್ತೆ ಪಕ್ಕದ ಮರದ ಮರೆಯಲ್ಲಿ ನಿಂತ ಅವಳನ್ನು ಆಗುಂತಕರು ಕಿಡ್ನಾಪ್ ಮಾಡುತ್ತಾರೆ.

ಇತ್ತ ಪಾಯಲ್‌ಗಾಗಿ ರಘು ಕಾದಿದ್ದಾನೆ. ಮನೆ ಕಾಲಿಂಗ್ ಬೆಲ್ ರಿಂಗ್ ಆದರೆ ಅವಸರದಿಂದ ಹೋಗಿ ತೆಗೆಯುತ್ತಾನೆ. ಹೊರಗೆ ಯಾರೂ

> **ಹೆಸರು:** ಲೈಫ್‌ಲೈನ್
> **ನಿರ್ದೇಶನ:** ಹ್ಯಾರಿ ಕಾಲ್ಸಾ, ಕಹಾನಿಕರ್ ಶರೋಮಿ
> **ನಿರ್ಮಾಣ:**ಪಥ್ವಾಲ್‌ಕರ್
> **ಛಾಯಾಗ್ರಹಣ:** ವೇದ್ ಪ್ರಕಾಶ್
> **ಧ್ವನಿ:** ರಾಜ್
> **ತಾರಾಗಣ:** ಚವಿ ತ್ಯಾಗಿ, ಪ್ರಶಾಂತ್

ಇಲ್ಲ. ಕಣ್ಣಾಡಿಸಿದಾಗ ಬಾಗಿಲ ಎದುರು ಒಂದು ರಕ್ತಸಿಕ್ತ ಹಾಳೆಯಲ್ಲಿ ಒಂದು ಫೋನ್ ನಂಬರ್ ಬರೆದಿರುವುದು ಕಾಣಿಸುತ್ತದೆ. ಆತಂಕದಿಂದ ಎತ್ತಿಕೊಂಡು ಒಳಬಂದು ಫೋನ್ ಮಾಡಿದರೆ ಅತ್ತಲಿಂದ ಪಾಯಲ್ ಧ್ವನಿ!

ಪಾಯಲ್‌ಳನ್ನು ಕಿಡ್ನಾಪ್ ಮಾಡಿರುವವರು ಇಪ್ಪತ್ತು ಲಕ್ಷ ರೂಪಾಯಿ ಬೇಡಿಕೆ ಇಡುತ್ತಿದ್ದಾರೆ. ರಘು ಸ್ನೇಹಿತರ ಬಳಿಯೆಲ್ಲ ಹಣಕ್ಕಾಗಿ ಕೇಳುತ್ತಾನೆ. ಹೊಂದಿಸಲು ಆಗದಿರುವಾಗ ಆಭರಣಗಳನ್ನು ತಡಕಾಡಲು ಆರಂಭಿಸುತ್ತಾನೆ. ಅಲ್ಲೊಂದು ಮೊಬೈಲ್ ಸಿಗುತ್ತದೆ. ಅದರಲ್ಲೊಂದು ವಿಡಿಯೊ ಇದೆ. ಅದು ರಘುವಿನ ಹೆಂಡತಿ ಪಾಯಲ್ ಬೇರೆ ಪುರುಷನೊಟ್ಟಿಗೆ ಇರುವ ವಿಡಿಯೊ ಇದೆ. ತನ್ನ ಪ್ರೀತಿಯ ಹೆಂಡತಿ ಬೇರೊಬ್ಬನೊಂದಿಗೆ ಸಂಬಂಧ ಹೊಂದಿದ್ದಳು ಎನ್ನುವುದನ್ನು ಅರಗಿಸಿಕೊಳ್ಳುವುದು ರಘುವಿಗೆ ಕಷ್ಟವಾಗುತ್ತದೆ. ಅಷ್ಟರಲ್ಲಿಯೇ ಕಿಡ್ನಾಪ್ ಮಾಡಿದವರ ಫೋನ್ ಮತ್ತೆ ಬರುತ್ತದೆ. ಅಲ್ಲಿ ಪಾಯಲ್‌ಳ ರೋಧನ ಕೇಳಿಸುತ್ತಿದೆ. 'ರಘು ನನ್ನನ್ನು ಇಲ್ಲಿಂದ ಬಿಡಿಸಿಕೊಂಡು ಹೋಗು' ಎಂದು ಅಂಗಲಾಚುತ್ತಿದ್ದಾಳೆ. ರಘು, 'ನಾನು ಆಫೀಸಿಗೆ ಹೋದಾಗ ಮನೆಯಲ್ಲಿ ಏನು ಮಾಡುತ್ತಿದ್ದೆ. ನಿನಗೆ ಬೇರೆ ಪುರುಷನೊಂದಿಗೆ ಸಂಬಂಧ ಇರುವುವು ನಿಜವಾ?' ಎಂದು ಕೇಳುತ್ತಾನೆ. ಪಾಯಲ್ 'ಒಮ್ಮೆ ನಾನು ತಪ್ಪು ಮಾಡಿರುವುದು ನಿಜ. ಆದರೆ ನಿನ್ನನ್ನು ಅಷ್ಟೇ ಪ್ರೀತಿಸುತ್ತೇನೆ. ಕ್ಷಮಿಸು' ಎಂದು ಕೇಳಿಕೊಳ್ಳುತ್ತಾಳೆ. ಆದರೆ ರಘು ಕಿಡ್ನಾಪ್ ಮಾಡಿದವರಿಗೆ, 'ನೀವು ಅವಳನ್ನು ಏನು ಬೇಕಾದರೂ ಮಾಡಿಕೊಳ್ಳಿ' ಎಂದು ಹೇಳಿ ಫೋನಿಟ್ಟುಬಿಡುತ್ತಾನೆ. ಅಷ್ಟರಲ್ಲಿಯೇ ಅವನ ಸ್ನೇಹಿತನೊಬ್ಬ, 'ಹಣ ಹೊಂದಿಸಿದ್ದೇನೆ' ಎಂದು ಕಾಲ್ ಮಾಡುತ್ತಾನೆ. ರಘು ತನ್ನ ಹೆಂಡತಿಯನ್ನು ಕಿಡ್ನಾಪ್ ಮಾಡಿದವರಿಂದ ಕಾಪಾಡುತ್ತಾನಾ? ಅವಳನ್ನು ಬಿಟ್ಟು ಬಿಡುತ್ತಾನಾ? ಎಂಬುದನ್ನು ಕಿರುಚಿತ್ರದಲ್ಲಿಯೇ ನೋಡಬೇಕು.

ತಪ್ಪುಗಳು ಎಲ್ಲರಿಂದಲೂ ನಡೆಯುತ್ತವೆ. ಆದರೆ ಅರೆಗಳಿಗೆಯ ಮೈಮರೆವಿನಿಂದಾದ ಒಂದು ತಪ್ಪು ಅವನ ಇಡೀ ವ್ಯಕ್ತಿತ್ವವನ್ನು ನಿರ್ಧರಿಸುವ ಹಾಗಾಗಬಾರದು ಎಂಬ ಕಾಳಜಿ ಈ ಕಿರುಚಿತ್ರದ ಹಿಂದಿದೆ. ಆ ಕಾಳಜಿಯೇ ಇಡೀ ಕಿರುಚಿತ್ರದ ಮುನ್ನಲೆಯಲ್ಲಿ ಇರುವುದರಿಂದ ಉಳಿದ ತಾರ್ಕಿಕ ಕೊರತೆಗಳನ್ನು ಮರೆತು ನೋಡಬಹುದು.

ಕಿರುಚಿತ್ರ ವೀಕ್ಷಣೆಗೆ
https://bit.ly/3GrYYGg
ಕೊಂಡಿ/ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.